



# ಲೋಹದಲ್ಲಿ ಅರಳುವ ಕಲೆ





**ಭಾರತದ ಅತ್ಯಂತ ಪ್ರಾಚೀನ ಎರಕ ಕಲೆ ಎನ್ನುವ ಹಿರಿಮೆಯ ಡೋಕ್ರಾ, ಇದೀಗ ಹೊಸ ಹುಟ್ಟಿನ ನಿರೀಕ್ಷೆಯಲ್ಲಿದೆ.**

■ ಸುನೀಲ ಬಾರ್ಕೂರ್

ಹೊಳೆಯುವ ಮೈಯ, ದೊಡ್ಡ ಕಣ್ಣುಗಳ ಆ ಗೂಬೆ ನಮ್ಮತ್ತಲೇ ನೋಡುತ್ತದೆ! ನಮ್ಮ ಕಣ್ಣುಗಳೂ ಅದರತ್ತಲೇ. ನರ್ತಿಸುವ ಬಾಲೆಯನ್ನಂತೂ ಮತ್ತೆ ಮತ್ತೆ ನೋಡುವಾಸೆ. ಕುದುರೆ, ಆನೆಗಳಂತೂ ಚಿತ್ತಾಪಹಾರಿ. ದುರ್ಗೆ, ಕಾಳಿ, ಶಿವ–ಪಾರ್ವತಿ, ಕೃಷ್ಣ–ರಾಧೆಯರಂತೂ ನೋಡಿದರೆ ಭಕ್ತಿ ಉಕ್ಕುವಷ್ಟು ಮುದ್ದು. ಹಾಂ, ಇವುಗಳು ಪ್ರಾಣವಿರುವ ಜೀವಿಗಳಲ್ಲ. ಡೋಕ್ರಾ ಕಲೆಯಲ್ಲಿ ಅರಳಿದ ಕಲಾಕೃತಿಗಳು.

ನಮ್ಮ ನಡುವಿನ ಅತ್ಯಂತ ಪ್ರಾಚೀನ ಲೋಹಕಲೆ ಎನ್ನುವುದು ಡೋಕ್ರಾದ ಅಗ್ಗಳಿಕೆ. ಹರಪ್ಪ ಮೊಹೆಂಜೊದಾರೊ ಉತ್ಖನನದ ಕುರಿತು ಓದುವಾಗ, ಅಲ್ಲಿ ದೊರೆತ ಅವಶೇಷಗಳಲ್ಲಿ, ನರ್ತಿಸುತ್ತಿರುವ ಬಾಲೆಯ ಚಿತ್ರವೊಂದರ ಕುರಿತು ನಾವು ಓದಿರುತ್ತೇವೆ, ನೋಡಿರುತ್ತೇವೆ. ಆ ಕಲಾಕೃತಿ, ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ಭಾರತೀಯ ಕಲೆ ಸಾಧಿಸಿದ ಯಶಸ್ಸಿಗೆ ನಿದರ್ಶನದಂತಿದೆ. ಲೋಹಗಳನ್ನಾಧರಿಸಿದ ಈ ಕಲೆ ಈಗಲೂ ಚಾಲ್ತಿಯಲ್ಲಿದೆ, ಡೋಕ್ರಾ ಹೆಸರಿನಲ್ಲಿ.

ಡೋಕ್ರಾ ಕಲಾಕೃತಿಯನ್ನು ತಯಾರಿಸಲು ಮೊದಲು ಆ ಕಲಾಕೃತಿಯ ಗಾತ್ರ ಮತ್ತು ಆಕೃತಿಯ ಕಚ್ಚಾ ಅಚ್ಚೊಂದನ್ನು ಮಣ್ಣಿನಲ್ಲಿ ತಯಾರಿಸಲಾಗುತ್ತದೆ. ಸಿದ್ಧಗೊಂಡ ಅಚ್ಚಿನ ಮೇಲೆ ಜೇನು ಮತ್ತು ಕೆಲವು ಜಾತಿಯ ಮರಗಳ ಅಂಟಿನ ಮೇಣದಿಂದ ತಯಾರಾದ ಅಂಟನ್ನು ಮೆತ್ತಲಾಗುತ್ತದೆ. ಆ ಅಂಟಿನ ಮೇಲ್ಮೈನಲ್ಲಿ ಕಲಾಕೃತಿಯ ಆಕಾರದ ಅನುಗುಣವಾಗಿ ಕೊರೆದು, ಅಚ್ಚನ್ನು ಮೂಡಿಸಲಾಗುತ್ತದೆ. ಆ ಸಂಕೀರ್ಣ ಕುಸುರಿ ಕೆಲಸವೇ ತಯಾರಾಗುವ ಕಲಾಕೃತಿಯ ಅಂದವನ್ನು ನಿರ್ಧರಿಸುತ್ತದೆ. ಇದಾದ ನಂತರ ಮೇಣದ ಮೇಲ್ಮೈಯ ಮೇಲೆ ಮತ್ತೊಂದು ಸುತ್ತು ಜೇಡಿಮಣ್ಣನ್ನು ಮೆತ್ತಿ ಅಂತಿಮ ಅಚ್ಚನ್ನು ರೂಪಿಸಲಾಗುತ್ತದೆ. ಹೀಗೆ ತಯಾರಾದ ಅಚ್ಚಿನೊಳಗೆ ಕರಗಿಸಿದ ಲೋಹದ ಬಿಸಿ ಎರಕವನ್ನು ಸುರಿಯಲಾಗುತ್ತದೆ. ಅಚ್ಚಿನೊಳಗಿನ ಲೋಹದ ಎರಕ, ತನ್ನ ಶಾಖದಿಂದ ಒಳಗಿನ ಮೇಣವನ್ನು ಕರಗಿಸಿ ಹೊರಹಾಕಿ ಆ ಸ್ಥಾನವನ್ನು ತಾನು ತುಂಬುತ್ತದೆ. ಎರಕವು ನಿಧಾನವಾಗಿ ತಂಪಾಗುತ್ತ ಗಟ್ಟಿಯಾಗಿ, ಮಣ್ಣಿನ ಪದರದ ಮಧ್ಯೆ ಮೇಣವು ಹೊಂದಿದ್ದ ಆಕಾರವನ್ನು ಪಡೆಯುತ್ತದೆ. ನಂತರ, ಮಣ್ಣಿನ ಪದರುಗಳನ್ನು ಒಡೆದು, ಲೋಹದ ಕಲಾಕೃತಿಯನ್ನು ಹೊರತೆಗೆದು, ಅದಕ್ಕೆ ಅಂತಿಮಸ್ಪರ್ಶ ನೀಡಲಾಗುತ್ತದೆ.

ಡೋಕ್ರಾ ಕಲಾಕೃತಿಗಳ ತಯಾರಿಗೆ ಹೆಚ್ಚು ಬಳಕೆಯಾಗುವ ಲೋಹ ಕಂಚು. ಈ ಕಲಾಪ್ರಕಾರವು ಡೋಕ್ರಾದಮಾರ ಎಂಬ ಕಂಚುಗಾರರ ಪಂಗಡದ ಕುಲಕಸುಬು. ಈ ಅಲೆಮಾರಿ ಪಂಗಡದ ಮೂಲ ಪಶ್ಚಿಮ ಬಂಗಾಳ ಮತ್ತು ಒಡಿಶಾ. ಪ್ರಸ್ತುತ ದೇಶದೆಲ್ಲೆಡೆ ಚದುರಿಹೋಗಿರುವ ಈ ಸಮುದಾಯ, ತಮ್ಮ ಮೂಲವೃತ್ತಿಯನ್ನು ಸಣ್ಣಪುಟ್ಟ ಮಾರ್ಪಾಡಿನೊಂದಿಗೆ ಮುಂದುವರೆಸಿದೆ. ಸ್ಥಳೀಯ ಸ್ಪರ್ಶದೊಂದಿಗೆ ಈ ಕಲೆ ಸ್ಥಳೀಯ ಹೆಸರುಗಳನ್ನೂ ತನ್ನೊಂದಿಗೆ ತಳುಕು ಹಾಕಿಕೊಂಡಿದೆ. ಪ್ರಮುಖವಾಗಿ ಈ ಕಲೆಯನ್ನು ಉತ್ತರ ಮತ್ತು ದಕ್ಷಿಣ ಭಾರತೀಯ ವಿಧಾನಗಳೆಂದು ವಿಂಗಡಿಸಲಾಗಿದೆ. ದಕ್ಷಿಣದ ಕಲಾಕೃತಿಗಳು ಇಡಿಯಾಗಿದ್ದರೆ, ಉತ್ತರಭಾರತದವು ಒಳಗಿನಿಂದ ಟೊಳ್ಳಾಗಿರುತ್ತವೆ.

ಛತ್ತೀಸ್‌ಗಡದ ಡೋಕ್ರಾ ಕಲಾಕೃತಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧವಾಗಿವೆ. ತೆಲಂಗಾಣದ ಆದಿಲಾಬಾದ್ ಡೋಕ್ರಾಕಲೆ 2018ರಲ್ಲಿ 'ಜಿ ಐ' ಟ್ಯಾಗ್ ಪಡೆದಿದೆ. ಪಶ್ಚಿಮ ಬಂಗಾಲದಲ್ಲಿ ಡೋಕ್ರಾ ಕಲಾವಿದರು ಸಹಕಾರಿ ಸಂಘವನ್ನು ಸ್ಥಾಪಿಸಿಕೊಂಡು ತಮ್ಮ ಕಲಾಕೃತಿಗಳನ್ನು ಗ್ರಾಹಕರಿಗೆ ತಲುಪಿಸುತ್ತಿದ್ದಾರೆ.

ಬಹುತೇಕ ಸಾಂಪ್ರದಾಯಿಕ ಕಲೆಗಳಂತೆ ಡೋಕ್ರಾ ಕೂಡ ಆಧುನಿಕತೆಯ ಹೊಡೆತಕ್ಕೆ ಸಿಲುಕಿ ಅತಂತ್ರ ಸ್ಥಿತಿಯಲ್ಲಿದೆ. ಕೆಲವು ಕಲಾವಿದರ ಕುಟುಂಬಗಳು ಕುಲಕಸುಬನ್ನು ತ್ಯಜಿಸಿ ಹೊಸ ಉದ್ಯೋಗಗಳತ್ತ ಮುಖಮಾಡಿವೆ. ಈ ತ್ರಿಶಂಕು ಸ್ಥಿತಿಯ ನಡುವೆಯೂ ಡೋಕ್ರಾ ಕಲೆಯನ್ನು ಉಳಿಸಿ ಬೆಳೆಸುವ ಪ್ರಯತ್ನಗಳು ದೇಶದೆಲ್ಲೆಡೆ ಚಾಲ್ತಿಯಲ್ಲಿವೆ.

ಪ್ರತಿಕ್ರಿಯಿಸಿ: feedback@sudha.co.in